ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ. ಕೆ ಬಿ ವಿ ರವರಿಂದಃ

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಸಾಕ್ಷಿದಾರರು ನಿಪಿ **1** ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1**(ಎ) ಎಂದು ಗುರುತಿಸಿದೆ. ಸಾಕ್ಷಿಯ ನಿಪಿ **1** ರಲ್ಲಿ ಪ್ರತಿವಾದಿಗಳು **1** ಮತ್ತು **2** ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ **1**(ಬಿ) ಮತ್ತು ನಿಪಿ **1**(ಸಿ) ಎಂದು ಗುರುತಿಸಿದೆ. ಸಾಕ್ಷಿದಾರರು ನಿಪಿ **1** ರಲ್ಲಿ ಇನ್ನೊಬ್ಬ ಸಾಕ್ಷಿದಾರರಾದ ಶಿವಸ್ವಾಮಿ ಯವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1** (ಡಿ) ಎಂದು ಗುರುತಿಸಿದೆ. ನಿಪಿ **1** ರಲ್ಲಿ ಸಾಕ್ಷಿಯು ವಾದಿ ಕಂಪನಿಯ ನಿರ್ದೇಶಕರಾದ ಆಶೋಕ್ ಕುಮಾರ್ ಗಾಂಧಿಯವರ ಸಹಿಯನ್ನು ಗುರುತಿಸಿದದ್ದು ಅದನ್ನು ನಿಪಿ **1**(ಇ) ಎಂದು ಗುರುತಿಸಿದೆ. ನಿಪಿ **1** ನ್ನು ಬರೆದಂತಹ ದಸ್ತವೇಜು ಬರಹಗಾರರಾದ ಶಿವಣ್ಣ ಬಾನಂದೂರು ರವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ **1**(ಎಫ್) ಗುರುತಿಸಿದೆ. **1** ನೇ ಪ್ರತಿವಾದಿ ಅವರ ಅಪ್ರಾಪ್ತ ವಯಸ್ಸಿನ ಮಕ್ಕಳಾದ **3** ಮತ್ತು **4** ನೇ ಪ್ರತಿವಾದಿಗಳ ಪರವಾಗಿ ನಿಪಿ **1** ರಲ್ಲಿ ಸಹಿ ಮಾಡಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1** (ಜಿ) ಎಂದು ಗುರುತಿಸಿದೆ.

<u>**ಪಾಟೀ ಸವಾಲಿಗೆ ಮುಂದೂಡಲಾಯಿತು.**</u>

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.